# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **2491** |
| ಉತ್ತರಿಸಬೇಕಾದ ದಿನಾಂಕ | : | 23.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ವಿವಿಧ ಹಂತದ ಕಛೇರಿಗಳು ಯಾವುದು; | ವಸತಿ ಇಲಾಖೆ ಅಧೀನದಲ್ಲಿ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ರಾಜೀವ್ ಗಾಂಧಿ ವಸತಿ ನಿಗಮ ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕರಗಳು ಇರುತ್ತವೆ.<br>1. ಕರ್ನಾಟಕ ಗೃಹ ಮಂಡಳಿಯು ಒಂದು ರಾಜ್ಯ ಮಟ್ಟದ ಸಂಸ್ಥೆಯಾಗಿದ್ದು, ಮಂಡಳಿಯ ಯೋಜನೆಗೆ ಅನುಗುಣವಾಗಿ 13 ಸಮನ್ವಯ ಕಛೇರಿ ಹಾಗೂ 35 ಜಿಲ್ಲಾ ಯೋಜನೆ ಕಛೇರಿಯನ್ನು ಹೊಂದಿದ್ದು ಅದರ ವಿವರವನ್ನು ಅನುಬಂಧ -1ರಲ್ಲಿ ಒದಗಿಸಿದೆ.<br>2. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ರಾಜ್ಯದ್ಯಂತ ಹೊಂದಿರುವ ವಿವಿಧ ಹಂತದ ಕಛೇರಿಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.<br>3. ರಾಜೀವ್ ಗಾಂಧಿ ವಸತಿ ನಿಗಮ ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಗಳು ಬೆಂಗಳೂರಿನಲ್ಲಿ ಮಾತ್ರ ಕೇಂದ್ರ ಕಛೇರಿಗಳನ್ನು ಹೊಂದಿರುತ್ತವೆ. |
| (ಆ) | ಮಂಜೂರಾದ ಕೊರತೆಯಿರುವ ಹುದ್ದೆಗಳು ಯಾವುವು; ಕೊರತೆಯಿರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು; | 1) ಕರ್ನಾಟಕ ಗೃಹ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಿದೆ.<br>2) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಅನುಬಂಧ-4 ರಲ್ಲಿ ಒದಗಿಸಿದೆ.<br>3) ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಖಾಲಿ ಇರುವ ಹುದ್ದೆಗಳನ್ನು ಅನುಬಂಧ-5 ರಲ್ಲಿ ಒದಗಿಸಿದೆ.<br>4) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಅನುಬಂಧ-6 ರಲ್ಲಿ ಒದಗಿಸಿದೆ.<br>ಕರ್ನಾಟಕ ಗೃಹ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಮಂಡಳಿ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿ, ಆಯೋಗದಿಂದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪಡೆದು ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.<br>ಅವಶ್ಯಕತೆ ಇರುತ್ತದೆ. ಆದಕಾರಣ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿ ಇದ್ದು, ತಿದ್ದುಪಡಿಯ ನಂತರ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮಕೈಗೊಳ್ಳಲಾಗುವುದು. ಅವಶ್ಯಕತೆ ಇರುತ್ತದೆ. ಆದಕಾರಣ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿ ಇದ್ದು, ತಿದ್ದುಪಡಿಯ ನಂತರ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುವುದು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ಈ ಇಲಾಖೆಯ ಯೋಜನೆಗಳನ್ನು ಯಾವ ಇಲಾಖೆಯ ಅಧಿಕಾರಿಗಳಿಂದ ನಿರ್ವಹಿಸಲಾಗುತ್ತದೆ; | 1) ಕರ್ನಾಟಕ ಗೃಹ ಮಂಡಳಿಯಲ್ಲಿ ಯೋಜನೆಗಳನ್ನು ಮಂಡಳಿಯ ಅಧಿಕಾರಿಗಳಿಂದಲೇ ನಿರ್ವಹಿಸಲಾಗುತ್ತಿದೆ.<br>2) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳನ್ನು ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಅವಾಸ್ ಯೋಜನೆ (PMAY-HFA) ಯೊಂದಿಗೆ ಸಮನ್ವಯಗೊಳಿಸಲಾಗುತ್ತಿದ್ದು, ಸದರಿ ಯೋಜನೆಗಳನ್ನು ಮಂಡಳಿಯ ಅಧಿಕಾರಿಗಳು ಹಾಗೂ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳು 2010 ರಲ್ಲಿ ಅವಕಾಶ ಕಲ್ಪಿಸಿರುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆ ಸೇವೆ ಆಧಾರದ ಮೇಲೆ ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ.<br>3) ರಾಜೀವ್ ಗಾಂಧಿ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳನ್ನು ಗ್ರಾಮೀಣ ಭಾಗಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೂಲಕ ಹಾಗೂ ನಗರ ಭಾಗಕ್ಕೆ ಸಂಬಂಧಿಸಿದಂತೆ ನಗರಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು/ಆಯುಕ್ತರು/ ಜಿಲ್ಲಾಧಿಕಾರಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. |
| (ಈ) | ವಸತಿ ಇಲಾಖೆಯು ಜಿಲ್ಲಾ ತಾಲ್ಲೂಕು ಮಟ್ಟದಲ್ಲಿ ಕಛೇರಿ ಹೊಂದಿರುವುದರಿಂದ ಯೋಜನೆಯ ಪ್ರಗತಿಗೆ ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 1. ಕರ್ನಾಟಕ ಗೃಹ ಮಂಡಳಿಯ ತನ್ನ ಯೋಜನೆಗೆ ಅನುಗುಣವಾಗಿ ಜಿಲ್ಲಾ ಮಟ್ಟದಲ್ಲಿ ಸಮನ್ವಯ ಕಛೇರಿ ಹಾಗೂ ಜಿಲ್ಲಾ ಯೋಜನಾ ಕಛೇರಿಗಳನ್ನು ಹೊಂದಿದ್ದು, ತಾಲ್ಲೂಕು ಮಟ್ಟದಲ್ಲಿ ಯಾವುದೇ ಯೋಜನಾ ಕಛೇರಿಯನ್ನು ಹೊಂದಿರುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಯೋಜನಾ ಕಛೇರಿ ಹೊಂದಿರುವುದರಿಂದ ಯೋಜನೆಯ ಪ್ರಗತಿಗೆ ಯಾವುದೇ ತೊಡಕಾಗಿರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 2. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ರಾಜ್ಯದಲ್ಲಿನ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕೊಳಗೇರಿ ಗುಣಲಕ್ಷಣ ಹೊಂದಿರುವ ಪ್ರದೇಶಗಳನ್ನು ಮಂಡಳಿಯ ಕಾಯ್ದೆಯನ್ವಯ ಗುರುತಿಸಿ, ಆ ಪ್ರದೇಶಗಳಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಗೊಂಡು ನಿರ್ವಹಿಸಲಾಗುತ್ತಿದೆ. ಈ ಸಂಬಂಧ ಕರ್ನಾಟಕ ರಾಜ್ಯಾದ್ಯಂತ ಇರುವ ಎಲ್ಲಾ ಜಿಲ್ಲೆಗಳನ್ನು ಒಳಗೊಂಡಂತೆ ಆಡಳಿತಾತ್ಮಕ ಹಿತದೃಷ್ಟಿಯಿಂದ 10 ವಿಭಾಗ ಮತ್ತು 20 ಉಪ-ವಿಭಾಗ ಕಛೇರಿಗಳನ್ನು ಹೊಂದಿ ಯೋಜನೆಯ ಪ್ರಗತಿಗೆ ಯಾವುದೇ ತೊಡಕಾಗದಂತೆ ಕಾರ್ಯನಿರ್ವಹಿಸಲಾಗುತ್ತಿದೆ.<br>3. ರಾಜೀವ್ ಗಾಂಧಿ ವಸತಿ ನಿಗಮವು ಬೆಂಗಳೂರಿನಲ್ಲಿ ಮಾತ್ರ ಕೇಂದ್ರ ಕಛೇರಿಯನ್ನು ಹೊಂದಿದ್ದು, ಜಿಲ್ಲಾ ತಾಲ್ಲೂಕು ಮಟ್ಟದಲ್ಲಿ ಯಾವುದೇ ವಿಭಾಗ/ಪ್ರಾಂತೀಯ ಕಛೇರಿಯನ್ನು ಹೊಂದಿರುವುದಿಲ್ಲ, ಆದ್ದರಿಂದ ತೊಡಕಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. |
| (ಉ) | ಯೋಜನೆಯ ಮೇಲುಸ್ತುವಾರಿ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಹುದ್ದೆ ಸೃಷ್ಟಿಸಿ ಆಯಾ ತಾಲ್ಲೂಕಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಲ್ಲಿ ಸೇವಾ ಜೇಷ್ಠತೆ ಹೊಂದಿರುವವರನ್ನು ಅಧಿಕ ಪ್ರಭಾರದಲ್ಲಿರಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; ಇದರಿಂದ ಆರ್ಥಿಕ ಉಳಿತಾಯವಾಗುವುದನ್ನು ಸರ್ಕಾರ ಗಮನಿಸಿದೆಯೇ? | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪಡೆದ ಮಾಹಿತಿಯಂತೆ ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಹೊರತುಪಡಿಸಿ ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುವ ಇತರೆ ಎಲ್ಲಾ ಯೋಜನೆಗಳು (ವಸತಿ ಯೋಜನೆಯು ಒಳಗೊಂಡಂತೆ) ಸಮಗ್ರ ಮೇಲ್ವಿಚಾರಣೆ ಮಾಡುವ ಉದ್ದೇಶಕ್ಕಾಗಿ ತಾಲ್ಲೂಕು ಪಂಚಾಯತ್ ಹಂತದಲ್ಲಿ ಹೊಸದಾಗಿ ಸಹಾಯಕ ನಿರ್ದೇಶಕ (ಯೋಜನೆ ಮತ್ತು ಅಭಿವೃದ್ಧಿ) ಹುದ್ದೆ ಎಂದು ಮತ್ತು ತಾಲ್ಲೂಕು ಪಂಚಾಯತಿಯ ಇತರೆ ಆಡಳಿತಾತ್ಮಕ ವಿಷಯಗಳ ಮೇಲುಸ್ತುವಾರಿಗೆ ಸಹಾಯಕ ನಿರ್ದೇಶಕ (ಆಡಳಿತ) ಎಂದು ಪ್ರತಿ ತಾಲ್ಲೂಕಿಗೆ ಎರಡು ಹೆಚ್ಚುವರಿ ಹುದ್ದೆಗಳನ್ನು ಸೃಜನೆ ಮಾಡಲು ಸಹಮತಿ ಕೋರಿ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಲಾಗಿತ್ತು. ಸದರಿ ಇಲಾಖೆಯು ಅಂತಿಮವಾಗಿ ಪ್ರತಿ ತಾಲ್ಲೂಕಿಗೆ ಒಂದು ಹುದ್ದೆಯನ್ನು ಸೃಜನೆ ಮಾಡಲು ಸಹಮತಿ ನೀಡಿದ್ದನ್ನು ಅನುಸರಿಸಿ, ಪ್ರತಿ ತಾಲ್ಲೂಕಿಗೆ ಒಂದು ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಹುದ್ದೆಯನ್ನು ಸೃಜನೆ ಮಾಡಿ ದಿನಾಂಕ:31.5.2021 ರಂದು ಆದೇಶ ಹೊರಡಿಸಿದ್ದು, ಸದರಿ ಹುದ್ದೆಗೆ ದಿನಾಂಕ:17.08.2021 ರಂದು ಕಾರ್ಯಹಂಚಿಕೆ ಮಾಡಲಾಗಿದೆ.<br>ಉಳಿದಂತೆ, ಮಾತೃ ವೃಂದಕ್ಕೆ ಸೇರಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಗಳ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆಗಳು ಬಾಕಿ ಇರುವುದರಿಂದ, ಈ ರೀತಿ ಸೃಜಿಸಲ್ಪಟ್ಟ ಕಲ್ಯಾಣ ಕರ್ನಾಟಕೇತರ ಭಾಗಕ್ಕೆ ಸೃಜನೆಯಾದ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಹುದ್ದೆಗಳನ್ನು ಮುಂಬಡ್ತಿ ಮೂಲಕ ಅಥವಾ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ-32 ರ ಅನುಸಾರ ಸ್ವತಂತ್ರ ಪ್ರಭಾರದಲ್ಲಿರಿಸಿ ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಕಾರಣದಿಂದ ಆರ್ಥಿಕ ಇಲಾಖೆಯು ಹೆಚ್ಚುವರಿಯಾಗಿ ಮತ್ತೊಂದು ಸಹಾಯಕ ನಿರ್ದೇಶಕ ಹುದ್ದೆಯನ್ನು ಸೃಜಿಸಲು ಸಹಮತಿ ನೀಡದ ಕಾರಣ ವಸತಿ ಯೋಜನೆಯನ್ನು ಒಳಗೊಂಡಂತೆ ಇತರೆ ಯೋಜನೆಗಳ ಮೇಲ್ವಿಚಾರಣೆಗೆ ತಾಲ್ಲೂಕು ಮಟ್ಟದಲ್ಲಿ ಹುದ್ದೆ ಸೃಜನೆ ಮಾಡಲು ಸಾಧ್ಯವಾಗಿರುವುದಿಲ್ಲ. ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿ ಮಂಜೂರಾಗಿರುವ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ/ಪಂಚಾಯತ್ ರಾಜ್) ಹುದ್ದೆಗಳ ಪೈಕಿ ಸಾಕಷ್ಟು ಹುದ್ದೆಗಳು ಖಾಲಿ ಇದ್ದು, ಈ ರೀತಿ ಖಾಲಿ ಇರುವ ಹುದ್ದೆಗಳಿಗೆ ಸಹಾಯಕ ನಿರ್ದೇಶಕರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಲು ಸಾಧ್ಯವಾಗದ ಪ್ರಕರಣಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತೆ/ಅರ್ಹತೆಯನ್ನು ಪರಿಶೀಲಿಸಿಕೊಂಡು ಹೆಚ್ಚುವರಿ ಪ್ರಭಾರದಲ್ಲಿರಿಸಲು ಕ್ರಮವಹಿಸುವಂತೆ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನಿರ್ದೇಶನ ನೀಡಲಾಗಿದೆ. |

ಸಂಖ್ಯೆ :ವಇ 98 ಸ್ವೀಮರ 2022.

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

## ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜೂನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2118(2491)**
**ಕರ್ನಾಟಕ ಗೃಹ ಮಂಡಳಿಯ ಸಮನ್ವಯ ಹಾಗೂ ಜಿಲ್ಲಾ ಯೋಜನಾ ಕಛೇರಿಗಳ ಮಾಹಿತಿ.**
**ಪ್ರಧಾನ ಕಛೇರಿ:- ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ ಕೆ.ಜಿ.ರಸ್ತೆ, ಬೆಂಗಳೂರು.**

| ಕ್ರ.ಸಂ. | ಸಮನ್ವಯ ಕಛೇರಿ | ಕ್ರ.ಸಂ. | ಜಿಲ್ಲಾ ಯೋಜನಾ ಕಛೇರಿಗಳು |
|---|---|---|---|
| 1 | ಬೆಂಗಳೂರು ನಗರ | 1 | ಬೆಂಗಳೂರು ನಗರ |
| | | 2 | ಯಲಹಂಕ, |
| | | 3 | ಎನ್.ಜಿ.ವಿ. |
| | | 4 | ಕೆಂಗೇರಿ-ಬಂಡೇಮಠ |
| 2 | ಬೆಂಗಳೂರು ಗ್ರಾಮಾಂತರ | 5 | ಬೆಂಗಳೂರು ಗ್ರಾಮಾಂತರ ಜಿಲ್ಲೆ |
| | | 6 | ಕೋಲಾರ ಜಿಲ್ಲೆ |
| | | 7 | ಚಿಕ್ಕಬಳ್ಳಾಪುರ ಜಿಲ್ಲೆ |
| 3 | ಸೂರ್ಯನಗರ-1 | 8 | ಸೂರ್ಯನಗರ ಹಂತ I ಮತ್ತು II |
| 4 | ಸೂರ್ಯನಗರ-2 | 9 | ಸೂರ್ಯನಗರ ಹಂತ III |
| 5 | ಸೂರ್ಯನಗರ ಹಂತ IV | | |
| 6 | ರಾಮನಗರ | 10 | ರಾಮನಗರ ಜಿಲ್ಲೆ |
| | | 11 | ತುಮಕೂರು ಜಿಲ್ಲೆ |
| 7 | ಮೈಸೂರು | 12 | ಮೈಸೂರು ಜಿಲ್ಲೆ |
| | | 13 | ಚಾಮರಾಜನಗರ ಜಿಲ್ಲೆ |
| | | 14 | ಮಂಡ್ಯ ಜಿಲ್ಲೆ |
| | | 15 | ಕೊಡಗು ಜಿಲ್ಲೆ |
| 8 | ಹಾಸನ | 16 | ಹಾಸನ ಜಿಲ್ಲೆ |
| | | 17 | ಚಿಕ್ಕಮಂಗಳೂರು ಜಿಲ್ಲೆ |
| | | 18 | ದಕ್ಷಿಣ ಕನ್ನಡ ಜಿಲ್ಲೆ |
| | | 19 | ಉಡುಪಿ ಜಿಲ್ಲೆ |
| 9 | ಶಿವಮೊಗ್ಗ | 20 | ಶಿವಮೊಗ್ಗ ಜಿಲ್ಲೆ |
| | | 21 | ದಾವಣಗೆರೆ ಜಿಲ್ಲೆ |
| | | 22 | ಚಿತ್ರದುರ್ಗ ಜಿಲ್ಲೆ |
| 10 | ಹುಬ್ಬಳ್ಳಿ-ಧಾರವಾಡ | 23 | ಧಾರವಾಡ ಜಿಲ್ಲೆ |
| | | 24 | ಹಾವೇರಿ ಜಿಲ್ಲೆ |
| | | 25 | ಉತ್ತರಕನ್ನಡ ಜಿಲ್ಲೆ (ಕಾರವಾರ) |
| | | 26 | ಬೆಳಗಾವಿ ಜಿಲ್ಲೆ |
| 11 | ಗದಗ್ | 27 | ಗದಗ ಜಿಲ್ಲೆ |
| | | 28 | ಬಾಗಲಕೋಟೆ ಜಿಲ್ಲೆ |
| | | 29 | ಕೊಪ್ಪಳ ಜಿಲ್ಲೆ |
| 12 | ಗುಲ್ಬರ್ಗಾ | 30 | ಗುಲ್ಬರ್ಗಾ ಜಿಲ್ಲೆ |
| | | 31 | ಬೀದರ್ ಜಿಲ್ಲೆ |
| | | 32 | ಯಾದಗಿರಿ ಜಿಲ್ಲೆ |

| | | | |
|---|---|---|---|
| 13 | ಬಳ್ಳಾರಿ | 33 | ಬಳ್ಳಾರಿ ಜಿಲ್ಲೆ |
| | | 34 | ರಾಯಚೂರು ಜಿಲ್ಲೆ |
| | | 35 | ವಿಜಯಪುರ ಜಿಲ್ಲೆ |

ಸಹಾಯಕ ಕಂದಾಯ ಅಧಿಕಾರಿ,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

ಅನುಬಂಧ – 2

# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

## ಅಂಗ ರಚನೆ

- ಅಧ್ಯಕ್ಷರು
- ಆಯುಕ್ತರು
  - ಕಾರ್ಯದರ್ಶಿಗಳು
    - ಆಡಳಿತ ಶಾಖೆ
      - ಕಾನೂನು ಶಾಖೆ
      - ಎಸ್ಟೇಟ್ ಶಾಖೆ
    - ಕಂದಾಯ ಶಾಖೆ-1
      - ಕಂದಾಯ ಶಾಖೆ-2
  - ಉಪ ನಿರ್ದೇಶಕರು
    - ಸಹಾಯಕ ನಿರ್ದೇಶಕರು
      - ಅಂಕಿ ಅಂಶ ಶಾಖೆ
  - ಮುಖ್ಯ ಲೆಕ್ಕಾಧಿಕಾರಿಗಳು
    - ಲೆಕ್ಕಾಧೀಕ್ಷಕರು
      - ಲೆಕ್ಕಪತ್ರ ಶಾಖೆ
  - ತಾಂತ್ರಿಕ ಕಛೇರಿಗಳು
    - ತಾಂತ್ರಿಕ ನಿರ್ದೇಶಕರು ಬೆಂಗಳೂರು ವೃತ್ತ
      - ಬೆಂಗಳೂರು ವಿಭಾಗ
        - ಬೆಂ. ಉಪ ವಿಭಾಗ-1
          - ಬೆಂ. ಉಪ ವಿಭಾಗ-3
      - ಬೆಂಗಳೂರು ವಿಭಾಗ-2
        - ಬೆಂ. ಉಪ ವಿಭಾಗ-2
          - ಬೆಂ. ಉಪ ವಿಭಾಗ-4
      - ಬೆಂಗಳೂರು ವಿಭಾಗ-3
        - ಬೆಂ. ಉಪ ವಿಭಾಗ-5
          - ತುಮಕೂರು ಉಪ ವಿಭಾಗ (ತುಮಕೂರು/ ಚಿಕ್ಕ ಬಳ್ಳಾಪುರ
    - ತಾಂತ್ರಿಕ ನಿರ್ದೇಶಕರು ಮೈಸೂರು ವೃತ್ತ
      - ಮೈಸೂರು ವಿಭಾಗ-1
        - ಮೈಸೂರು. ಉಪವಿಭಾಗ-1
          - ಹಾಸನ ಉಪವಿಭಾಗ (ಹಾಸನ/ ಚಿಕ್ಕ ಮಂಗಳೂರು)
      - ಮೈಸೂರು ವಿಭಾಗ-2
        - ಮೈಸೂರು ಉಪ ವಿಭಾಗ-2
          - ಮಂಡ್ಯ ಉಪವಿಭಾಗ (ಮಂಡ್ಯ/ ಚಾಮ ರಾಜ ನಗರ)
      - ಶಿವಮೊಗ್ಗ ವಿಭಾಗ
        - ಶಿವಮೊಗ್ಗ ಉಪವಿಭಾಗ (ಶಿವಮೊಗ್ಗ/ ಚಿತ್ರದುರ್ಗ)
          - ಮಂಗಳೂರು ಉಪವಿಭಾಗ (ದ.ಕನ್ನಡ/ ಉಡುಪಿ)
    - ತಾಂತ್ರಿಕ ನಿರ್ದೇಶಕರು ದಾರವಾಡ ವೃತ್ತ
      - ದಾರವಾಡ ವಿಭಾಗ
        - ಧಾರವಾಡ ಉಪವಿಭಾಗ (ಧಾರವಾಡ- ಹುಬ್ಬಳ್ಳಿ)
          - ಗದಗ ಉಪವಿಭಾಗ (ಗದಗ/ಕೊಪ್ಪಳ)
      - ಬೆಳಗಾವಿ ವಿಭಾಗ
        - ಬೆಳಗಾವಿ ಉಪವಿಭಾಗ (ಬೆಳಗಾವಿ/ ಉ.ಕನ್ನಡ)
          - ವಿಜಯಪುರ ಉಪವಿಭಾಗ (ವಿಜಯಪುರ/ ಬಾಗಲಕೋಟೆ)
    - ತಾಂತ್ರಿಕ ನಿರ್ದೇಶಕರು ಕಲಬುರಗಿ ವೃತ್ತ
      - ದಾವಣಗೆರೆ ವಿಭಾಗ
        - ದಾವಣಗೆರೆ ಉಪವಿಭಾಗ (ದಾವಣಗೆರೆ/ ಹಾವೇರಿ)
          - ಬಳ್ಳಾರಿ ಉಪವಿಭಾಗ (ಬಳ್ಳಾರಿ)
      - ಕಲಬುರಗಿ ವಿಭಾಗ
        - ಕಲಬುರಗಿ ಉಪವಿಭಾಗ (ಕಲಬುರಗಿ/ಬೀದರ)
          - ರಾಯಚೂರು ಉಪವಿಭಾಗ (ರಾಯಚೂರು/ ಯಾದಗಿರಿ)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2118(2491) ಕ್ಕೆ ಅನುಬಂಧ-3

| Sl NO. | Posts | Group | Sanctioned posts | Vacant Posts | Working Strength |
|---|---|---|---|---|---|
| 1 | 2 | 3 | 4 | 5 | 5 |
| | | | | | |
| 1 | HOUSING COMMISSIONER | A | 1 | 0 | 1 |
| 2 | SECRETARY | A | 1 | 1 | 0 |
| 3 | CHIEF ENGINEER | A | 1 | 0 | 1 |
| 4 | DEPUTY COMMR RC | A | 1 | 1 | 0 |
| 5 | SUPERINTDENT ENGINEEER | A | 2 | 0 | 2 |
| 6 | JOINT DIRECTOR (TP) | A | 1 | 1 | 0 |
| 7 | DEPUTY GENERAL MANAGER (CS) | A | 1 | 1 | 0 |
| 8 | CONTROLLER OF FINANACE | A | 1 | 0 | 1 |
| 9 | SPL LAND ACQ OFFICER | A | 2 | 1 | 1 |
| 10 | EXECUTIVE ENGINEER | A | 13 | 3 | 12 |
| 11 | DEPUTY DIRECTOR (TP) | A | 1 | 0 | 1 |
| 12 | REVEUE OFFICER | A | 5 | 0 | 5 |
| 13 | ACCOUNTS OFFICER | A | 3 | 1 | 2 |
| 14 | ASST EXE ENGINEER | A | 33 | 3 | 30 |
| 15 | ASST DIRECTOR (TP) | A | 1 | 0 | 1 |
| 16 | ASST EXE ENGINEER ELE | A | 1 | 0 | 1 |
| 17 | SYSTEM ANALYST | A | 1 | 0 | 1 |
| 18 | SENIOR PROGRAMMER | B | 1 | 1 | 0 |
| 19 | ASST REVENUE OFFICER | B | 17 | 2 | 15 |
| 20 | ASSISTANT ENGINEER | B | 45 | 11 | 34 |
| 21 | ACCOUNTSUPERINTENDENT | B | 7 | 1 | 6 |
| 22 | SUPERINTENDENT | C | 17 | 4 | 13 |
| 23 | JE CIVIL | C | 52 | 41 | 11 |
| 24 | JUNIOR ENGINEER ELE | C | 5 | 4 | 1 |
| 25 | JUNIOR ENGINEER C P | C | 3 | 2 | 1 |
| 26 | JUNIOR ENGINEER CAD | C | 2 | 1 | 1 |
| 27 | STENOGRAPHER | C | 5 | 2 | 3 |
| 28 | FIRST DIVISION ASSISTANT | C | 104 | 24 | 80 |
| 29 | FIRST DIVISION A/C ASSISTANT | C | 5 | 4 | 1 |
| 30 | FIRST DIVISION ASSISTANT SURVEYER | C | 2 | 0 | 2 |
| 31 | FIRST DIVISION ASSISTANT DEO | C | 2 | 0 | 0 |
| 32 | SENIOR TYPIST | C | 10 | 1 | 9 |
| 33 | SECOND DIVISION ASSISTANT | C | 110 | 69 | 41 |
| 34 | TYPIST | C | 31 | 21 | 10 |
| 35 | DRIVER | C | 16 | 0 | 16 |
| 36 | LIFT OPERTOR | D | 2 | 0 | 2 |
| 37 | PUMP OPERTOR | D | 2 | 1 | 1 |
| 38 | PLUMBER | D | 1 | 1 | 0 |
| 38 | DAFEDAR/ BILL COLLECTOR/ ATTENDER/ BLUE PRINT OPERTOR | D | 30 | 26 | 4 |
| 39 | PEONS/ WATCH MAN/ CLEANER/ GARDNER/ PROCES SERVER/ SWEAPER/ SCAVENGER | D | 105 | 47 | 58 |
| | Total | | 643 | 275 | 368 |

ಕಾರ್ಯದರ್ಶಿಗಳ ಪರವಾಗಿ
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

ಅನುಬಂಧ-4

## ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

| ಕ್ರಸಂ | ವೃಂದಗಳ ವಿವರ | ವೇತನ ಶ್ರೇಣಿ | ಮಂಜೂರಾದ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಖಾಲಿ ಇರುವ ಹುದ್ದೆಗಳು | ಷರಾ |
|---|---|---|---|---|---|---|
| 1 | 2 | | 3 | 3 | 5 | 6 |
| | | ಗ್ರೂಪ್-ಎ | | | | |
| 1 | ಆಯುಕ್ತರು | 97100-141300 | 1 | 1 | 0 | |
| 2 | ತಾಂತ್ರಿಕ ನಿರ್ದೇಶಕರು | 74400-109600 | 2 | 2 | 0 | |
| 3 | ಕಾರ್ಯಪಾಲಕ ಅಭಿಯಂತರರು | 67550-104600 | 11 | 9 | 2 | |
| 4 | ಸಮುದಾಯ ಅಭಿವೃದ್ಧಿ ಅಧಿಕಾರಿ | 67550-104600 | 1 | 0 | 1 | |
| 5 | ಮುಖ್ಯಲೆಕ್ಕಾಧಿಕಾರಿಗಳು | 67550-104600 | 1 | 1 | 0 | |
| 6 | ಕಾರ್ಯದರ್ಶಿ | 56800-99600 | 1 | 1 | 0 | |
| 7 | ಉಪ ನಿರ್ದೇಶಕರು (ಅಂಕಿ-ಅಂಶ) | 52650-97100 | 1 | 0 | 1 | |
| 8 | ಸಹಾಯಕ ಕಾರ್ಯಪಾಲಕ ಅಭಿಯಂತರರು | 52650-97100 | 20 | 19 | 1 | |
| | **ಒಟ್ಟು** | | **38** | **33** | **5** | |
| | | ಗ್ರೂಪ್-ಬಿ | | | | |
| 9 | ಸಹಾಯಕ ನಿರ್ದೇಶಕರು (ಅಂಕಿ-ಅಂಶ) | 43100-83900 | 2 | 2 | 0 | |
| 10 | ಸಹಾಯಕ ಅಭಿಯಂತರರು | 43100-83900 | 31 | 17 | 14 | |
| 11 | ಕಾನೂನು ಅಧಿಕಾರಿ ಗ್ರೇಡ್-2 | 43100-83900 | 1 | 0 | 1 | |
| 12 | ಸಹಾಯಕ ಕಂದಾಯ ಅಧಿಕಾರಿ | 43100-83900 | 8 | 6 | 2 | |
| | **ಒಟ್ಟು** | | **42** | **25** | **17** | |
| | | ಗ್ರೂಪ್-ಸಿ | | | | |
| 13 | ಸಹಾಯಕ ಸಾರ್ವಜನಿಕ ಸಂಪರ್ಕ ಅಧಿಕಾರಿ | 37900-70850 | 1 | 0 | 1 | |
| 14 | ಕಂಪ್ಯೂಟರ್ ಪ್ರೋಗ್ರಾಮರ್ | 37900-70850 | 1 | 0 | 1 | |
| 15 | ಅಧೀಕ್ಷಕರು | 37900-70850 | 19 | 18 | 1 | |
| 16 | ಲೆಕ್ಕಾಧೀಕ್ಷಕರು | 37900-70850 | 2 | 2 | 0 | |
| 17 | ಮುಖ್ಯ ಪ್ರಾರೂಪಕರು | 37900-70850 | 1 | 1 | 0 | |
| 18 | ಕಿರಿಯ ಅಭಿಯಂತರರು | 33450-62600 | 15 | 9 | 6 | |
| 19 | ಪ್ರಾರೂಪಕರು | 33450-62600 | 14 | 4 | 10 | |
| 20 | ಪರಿಶೋಧಕರು | 27650-52650 | 1 | 0 | 1 | |
| 21 | ಪ್ರಥಮ ದರ್ಜೆ ಭೂಮಾಪಕರು | 27650-52650 | 6 | 2 | 4 | |
| 22 | ಆಪ್ತ ಸಹಾಯಕರು | 27650-52650 | 5 | 0 | 5 | |
| 23 | ಪ್ರಥಮ ದರ್ಜೆ ಸಹಾಯಕರು | 27650-52650 | 32 | 14 | 18 | |
| 24 | ಗಣಕಯಂತ್ರ ನಿರ್ವಾಹಕರು | 27650-52650 | 9 | 4 | 5 | |
| 25 | ಹಿರಿಯ ಕೆಲಸ ನಿರೀಕ್ಷಕರು | 27650-52650 | 12 | 8 | 4 | |
| 26 | ಕಿರಿಯ ಕೆಲಸ ನಿರೀಕ್ಷಕರು | 21400-42000 | 15 | 5 | 10 | |
| 27 | ಅನುರೇಖಕರು | 23500-47650 | 2 | 0 | 2 | |
| 28 | ದ್ವಿತೀಯ ದರ್ಜೆ ಸಹಾಯಕರು/ ಬಿಲ್ ಕಲೆಕ್ಟರ್ | 21400-42000 | 54 | 21 | 33 | |
| 29 | ಡ್ಯಾಟಾ ಎಂಟ್ರಿ ಆಪರೇಟರ್ | 21400-42000 | 9 | 1 | 8 | |
| 30 | ಹಿರಿಯ ವಾಹನ ಚಾಲಕರು | 27650-52650 | 3 | 2 | 1 | |
| 31 | ವಾಹನ ಚಾಲಕರು | 21400-42000 | 10 | 1 | 9 | |
| | **ಒಟ್ಟು** | | **211** | **92** | **119** | |
| | | ಗ್ರೂಪ್-ಡಿ | | | | |
| 32 | ಹಾಜರಿದಾರರು | 18600-32600 | 5 | 3 | 2 | |
| 33 | ಗ್ರೂಪ್-ಡಿ | 17000-28950 | 28 | 16 | 12 | |
| | **ಒಟ್ಟು** | | **33** | **19** | **14** | |
| | **ಮಹಾ ಒಟ್ಟು** | | **324** | **169** | **155** | |

## 2491ರ ಅನುಬಂಧ-೬

| ವೃಂದ | ಪದನಾಮ | ಖಾಲಿ ಇರುವ ಹುದ್ದೆಗಳು |
|---|---|---|
| ಎ | ಸಹಾಯಕ ಪ್ರಧಾನ ವ್ಯವಸ್ಥಾಪಕರು | 1 |
| | ಕಂಪನಿ ಕಾರ್ಯದರ್ಶಿ | 1 |
| ಬಿ | ವ್ಯವಸ್ಥಾಪಕರು | 4 |
| ಸಿ | ಕಾರ್ಯನಿರ್ವಾಹಕ ಸಹಾಯಕರು | 11 |
| | ವಾಹನ ಚಾಲಕರು | 3 |
| ಒಟ್ಟು | | 20 |

Saroja G.
Assistant General Manager (Admin)
Rajiv Gandhi Housing Corporation Limited

## ಅನುಬಂಧ-6

| ಕ್ರ. ಸಂ | ಮಂಜೂರಾತಿ ಹುದ್ದೆ | ಮಂಜೂರಾದ ಹುದ್ದೆಗಳ ಸಂಖ್ಯೆ | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 1 | ಕಾರ್ಯದರ್ಶಿ | 1 | 1 | 0 | ನಿಯೋಜನೆ |
| 2 | ಉಪ ಕಾರ್ಯದರ್ಶಿ | 1 | 0 | 1 | ನಿಯೋಜನೆ |
| 3 | ಹಣಕಾಸು ನಿಯಂತ್ರಕರು | 1 | 1 | 0 | ನಿಯೋಜನೆ |
| 4 | ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಅಧೀನ ಕಾರ್ಯದರ್ಶಿ | 1 | 1 | 0 | ನಿಯೋಜನೆ |
| 5 | ಸಹಾಯಕ ನಿರ್ದೇಶಕರು (ನಗರ ಯೋಜನೆ) | 2 | 1 | 1 | ನಿಯೋಜನೆ |
| 6 | ಸರ್ಕಾರದ ಅಧೀನ ಕಾರ್ಯದರ್ಶಿ | 1 | 1 | 0 | ನಿಯೋಜನೆ |
| 7 | ಸಹಾಯಕ ಕಾರ್ಯಪಾಲಕ ಅಭಿಯಂಯತರರು | 1 | 1 | 0 | ನಿಯೋಜನೆ |
| 8 | ಲೆಕ್ಕಾಧಿಕಾರಿ | 1 | 0 | 1 | ನಿಯೋಜನೆ |
| 9 | ಶಾಖಾಧಿಕಾರಿ | 2 | 2 | 0 | ನಿಯೋಜನೆ |
| 10 | ತಹಶೀಲ್ದಾರ್ | 1 | 1 | 0 | ನಿಯೋಜನೆ |
| 11 | ಅಡ್ಜುಡಿಕೇಟಿಂಗ್ ಆಫೀಸರ್ | 2 | 1 | 1 | ಗುತ್ತಿಗೆ |
| 12 | ಕಾನೂನು ಸಲಹೆಗಾರರು | 1 | 1 | 0 | ಗುತ್ತಿಗೆ |
| 13 | ಸಿಸ್ಟಂ ಅನಾಲಿಸ್ಟ್ | 1 | 1 | 0 | ಹೊರಗುತ್ತಿಗೆ |
| 14 | ಸಾರ್ವಜನಿಕ ಸಂಪರ್ಕಾಧಿಕಾರಿ | 1 | 1 | 0 | ಹೊರಗುತ್ತಿಗೆ |
| 15 | ಪ್ರೋಗ್ರಾಮರ್ | 1 | 1 | 0 | ಹೊರಗುತ್ತಿಗೆ |
| 16 | ಸಿಸ್ಟಂ ಅನಾಲಿಸ್ಟ್ ಅಸಿಸ್ಟೆಂಟ್ | 1 | 1 | 0 | ಹೊರಗುತ್ತಿಗೆ |
| 17 | ಸಹಾಯಕ ಅಭಿಯಂತರರು | 1 | 1 | 0 | ಹೊರಗುತ್ತಿಗೆ |
| 18 | ಕಿರಿಯ ಅಭಿಯಂತರರು | 1 | 0 | 1 | ನಿಯೋಜನೆ |
| 19 | ಪ್ರಥಮ ದರ್ಜೆ ಸಹಾಯಕರು | 6 | 6 | 0 | ಹೊರಗುತ್ತಿಗೆ |
| 20 | ರಾಜಸ್ವ ನಿರೀಕ್ಷಕರು | 2 | 0 | 2 | ನಿಯೋಜನೆ |
| 21 | ಭೂಮಾಪಕರು | 2 | 0 | 2 | ನಿಯೋಜನೆ |
| 22 | ಕಾನೂನು ಸಹಾಯಕರು | 1 | 0 | 1 | ನಿಯೋಜನೆ |
| 23 | ಲೆಕ್ಕ ಸಹಾಯಕರು | 1 | 1 | 0 | ಹೊರಗುತ್ತಿಗೆ |
| 24 | ಶೀಘ್ರಲಿಪಿಗಾರರು | 7 | 6 | 1 | ಹೊರಗುತ್ತಿಗೆ |
| 25 | ಡಾಕ್ಯೂಮೆಂಟ್ ರೈಟರ್ | 1 | 0 | 1 | ನಿಯೋಜನೆ |
| 26 | ದ್ವಿತೀಯ ದರ್ಜೆ ಸಹಾಯಕರು | 4 | 4 | 0 | ನಿಯೋಜನೆ |
| 27 | ಡಾಟಾ ಎಂಟ್ರಿ ಆಪರೇಟರ್ | 6 | 3 | 3 | ಹೊರಗುತ್ತಿಗೆ |
| 28 | ವಾಹನ ಚಾಲಕರು | 5 | 5 | 0 | ಹೊರಗುತ್ತಿಗೆ |
| 29 | ಡಿ-ಗ್ರೂಪ್ | 8 | 8 | 0 | ಹೊರಗುತ್ತಿಗೆ |
| | ಒಟ್ಟು | 64 | 49 | 15 | |

- ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳು ರಚಿಸಿಕೊಂಡಿಲ್ಲವಾದ್ದರಿಂದ ತನ್ನದೇ ಆದ ಸ್ವಂತ ಸಿಬ್ಬಂದಿ ಸಿಬ್ಬಂದಿಯನ್ನು ಹೊಂದಿಲ್ಲದ ಕಾರಣ, ಮಂಜೂರಾದ 64 ಹುದ್ದೆಗಳಲ್ಲಿ ನಿಯೋಜನೆ ಮೇಲೆ ಅಧಿಕಾರಿ / ಸಿಬ್ಬಂದಿ ವರ್ಗದವರು ಲಭ್ಯವಿಲ್ಲದ ವರ್ಗದವರು ಕಾರ್ಯನಿರ್ವಹಿಸುತ್ತಿದ್ದು, ಮಂಜೂರಾದ ಹುದ್ದೆಗಳಿಗೆ ಅಧಿಕಾರಿ / ಸಿಬ್ಬಂದಿ ವರ್ಗದವರು ಲಭ್ಯವಿಲ್ಲದ ಕಾರಣ ಹುದ್ದೆಯ ಎದುರಿಗೆ ನಿಯೋಜನೆಯ ಮೇಲೆ ಒಟ್ಟು 10 ಅಧಿಕಾರಿ/ಸಿಬ್ಬಂದಿ ವರ್ಗದವರು, ಒಟ್ಟು 3 ಅಧಿಕಾರಿ/ಸಿಬ್ಬಂದಿವರ್ಗದವರು ಗುತ್ತಿಗೆ ಆಧಾರದ ಮೇಲೆ ಹಾಗೂ 36 ಜನ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಾರ್ಯದರ್ಶಿ 21/03/2022

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ